ಹೊಟ್ಟೆಗೆ ಮತ್ತು ಎದೆ ಚುಚ್ಚಿಕೊಂಡು ಗಂಭೀರ ಗಾಯಗಳನ್ನು ಮಾಡಿಕೊಂಡಿರುತ್ತಾರೆ. ಇದನ್ನು ನೋಡಿದ ಚನ್ನರಾಯಪ್ಪ ಪಿ ಎಸ್ ಐ ಕೂಡಲೇ ವಿಕ್ಟೋರಿಯ ಆಸ್ಪತ್ರೆಗೆ ದಾಖಲು ಮಾಡುತ್ತಾರೆ. ವಿಕ್ಟೋರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಪಟ್ಟಿದ್ದ ಧನಂಜಯ ಸುಮಾರು ರಾತ್ರಿ 2–00 ಗಂಟೆಗೆ ಕೊನೆ ಉಸಿರು ಎಳೆಯುತ್ತಾರೆ. ಪ್ರಕಾಶ್ ಅವರಿಗೆ ಚಿಕಿತ್ಸೆ ನೀಡಿ ದೂರ ರೋಗಿಯಾಗಿ ಕಳುಹಿಸಲಾಗಿದೆ. ಈ ಸಂಬಂಧದಲ್ಲಿ ಜ್ಞಾನಭಾರತಿ ಪೊಲೀಸ್ ಠಾಣೆಯ ಮೊಕ್ಕದ್ದಮೆ ಸಂಖ್ಯೆ 188:2004 ಕಲಂ 309ರಲ್ಲಿ ಒಂದು ಕೇಸ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಠಾಣೆಗೆ ಕರೆದು ತಂದ ವ್ಯಕ್ತಿಗಳನ್ನು ಸರಿಯಾಗಿ ನೋಡಿಕೊಳ್ಳದೇ ನಿರ್ಲಕ್ಷ್ಯ ಮಾಡಿದ ಚನ್ನರಾಯಪ್ಪ ಎ ಎಸ್ ಐ ಹಾಗೂ ಸೆಂಟ್ರಿ ಚಂದ್ರರಾವ್ ಅವರನ್ನು ಅಮಾನತ್ತು ಮಾಡಲಾಗಿದೆ. ಮತ್ತು ಅವರ ಮೇಲೆ ಕೆ ಎಸ್ ಪಿ ಡಿಪಿ ನಿಯಮ 6ರ ಅನ್ವಯ ಒಂದು ಇಲಾಖಾ ವಿಚಾರಣೆಯನ್ನು ಮಾಡಲು ಆದೇಶಿಸಲಾಗಿದೆ. ಮೃತರ ಬಂಧುಗಳಿಗೆ ವಿಷಯ ತಿಳಿಸಿ ಶವದ ಅಂತಿಮಕ್ರಿಯೇ ಮಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಾನೂನು ಸುವ್ಯವಸ್ಥೆಗೆ ಯಾವುದೇ ತೊಂದರೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪರಿಸ್ಥಿತಿ ಶಾಂತವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪೋಲೀಸರ ಹೇಳಿಕೆ ಸತ್ಯಕ್ಕೆ ದೂರವಾಗಿರತಕ್ಕಂಥ ಹೇಳಿಕೆ. ಪೋಲೀಸರೇ ಹೊಡೆದು ಕೊಂಡಿರತಕ್ಕಂಥಾದ್ದು ಬರೀ ಗ್ಲಾಸ್‌ನಲ್ಲಿ ಚುಚ್ಚಿಕೊಂಡು ಸಾಯತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಕುಡಿದು ಓಡಾಡುತ್ತಾರೆ ಅಂದರೆ ಹಾಗಾದರೆ ಬೆಂಗಳೂರು ನಗರದಲ್ಲಿ ಕುಡಿದು ಓಡಾಡುವವರೆಲ್ಲರನ್ನೂ ಇವರು ದಸ್ತಗಿರಿ ಮಾಡುತ್ತಾರಾ? ಬೆಂಗಳೂರಿನಲ್ಲಿ ನೀವೇ ಹಾದಿ ಬೀದಿಗಳಲ್ಲಿ ಬಾರ್‌ಗಳಿಗೆ ಲೈಸೆನ್ಸ್ ಕೊಟ್ಟಿದ್ದೀರಿ. ಯಾರೂ ಬೇಕಾದರೂ ಕುಡಿಯಬಹುದು, ಯಾರು ಬೇಕಾದರೂ ತೂರಾಡಬಹುದು, ಪೊಲೀಸ್ ಸ್ಟೇಷನ್‌ನಲ್ಲಿ ಕೊಲೆಯಾಗಿರತಕ್ಕಂಥಾದ್ದು.....

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್‌ರವರೇ, ತಾವು ಹಿರಿಯರಿದ್ದೀರಿ. ಶೂನ್ಯ ವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ. ಉತ್ತರವನ್ನು ನಾವು ಕೊಟ್ಟಿದ್ದೇವೆ. ತಮಗೆ ಆ ಉತ್ತರ ಸಮಾಧಾನ ತರಲಿಲ್ಲ ಅಂದರೆ ತಾವು ಮತ್ತೊಂದು ರೂಪದಲ್ಲಿ ತನ್ನಿ. ಅದನ್ನು ಚರ್ಚೆ ಮಾಡಬಹುದು.

ಅಧ್ಯಕ್ಷರು : ನಿಯಮಾವಳಿಗಳನ್ನು ಪಾಲಿಸತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ. ದಯಮಾಡಿ ಸಹಕರಿಸಬೇಕು. ಮಾನ್ಯ ರಮೇಶ್ ಕುಮಾರ್‌ರವರು....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಪೊಲೀಸ್ ಸ್ಟೇಷನ್‌ನಲ್ಲಿ ಸಾವಾಗಿದೆ. ಸದನ ನಡೆಯುತ್ತಿದೆ. ಯಾರೂ ಕೇಳುವವರು ಇಲ್ಲ. ಇದು ಸರಿಯಲ್ಲ. ಇದು ಬಹಳ ಅನ್ಯಾಯ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಲು ಮುಂದಾದರು)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಸ್ಪಷ್ಟವಾಗಿ ಹೇಳಿದ್ದಾರೆ. ನೀವು ನಿಮ್ಮ ಕುರ್ಚಿಗೆ ಬನ್ನಿ ನೀವು ಇಲ್ಲ ಅಂದರೆ ಆ ಕುರ್ಚಿ ಮರ್ಯಾದೆ ಹೋಗುತ್ತದೆ. ದಯವಿಟ್ಟು ಬನ್ನಿ.

ಶ್ರೀ ಎಂ.ಪಿ. ಪ್ರಕಾಶ್ : ನೀವು ಮುಖ್ಯಮಂತ್ರಿಯಾದರೆ ಏನು ಮಾಡುತ್ತೀರಿ? ಪೊಲೀಸ್‌ನವರನ್ನೆಲ್ಲಾ ಒಂದೇ ಸಲ ತೆಗೆದುಬಿಡುತ್ತೀರಾ?

ಶ್ರೀ ವಾಟಾಳ್ ನಾಗರಾಜ್ : ಮಾಡಿ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) : ನಾವು ಏನು ಮಾಡವುದು ನೀವು ಯಾವಾಗಲೂ ಒಂಟಿ ಒಂಟಿಯಾಗಿಯೇ ಆರಿಸಿ ಬರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ : ದಯಮಾಡಿ ಒಂದು ನಿಮಿಷ. ನನ್ನನ್ನು ತಾವು ಮುಖ್ಯ ಮಂತ್ರಿಯಾದರೆ ಏನು ಮಾಡುತ್ತೀರಿ ಎಂದು ಮಾನ್ಯ ಹಿರಿಯ ಸಚಿವರಾದವರು ಕೇಳುತ್ತಿದ್ದಾರೆ. ನಾನು ಅವರನ್ನು ಈ ಸದನದಲ್ಲಿ ಕೇಳುತ್ತಿದ್ದೇನೆ. ಒಂದು ಸಲ ನನ್ನನ್ನು ಮುಖ್ಯಮಂತ್ರಿ ಮಾಡಿ ನೋಡಿ ಎಂದು ನೀವು ಯಾವುದನ್ನೂ ಲಘುವಾಗಿ ಕಾಣತಕ್ಕಂಥಾದ್ದು ಅಲ್ಲ. ನಾನು ಮುಖ್ಯಮಂತ್ರಿಯಾಗತಕ್ಕಂಥ ಕಾಲವನ್ನು ತಾವು ನೋಡತಕ್ಕಂಥ ಕಾಲ ಬಂದೇ ಬರುತ್ತದೆ. ಆದ್ದರಿಂದ ನಾನು ಸರ್ಕಾರದ ಹೇಳಿಕೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಮುಖ್ಯಮಂತ್ರಿಯಾಗಬೇಕಾದರೆ ಅಲ್ಲಿ ಮಾನ್ಯ ಯಡಿಯೂರಪ್ಪನವರು ಒಪ್ಪಬೇಕು. ಇತರರು ಒಪ್ಪಬೇಕು ಅಮೇಲೆ.

ಶ್ರೀ ವಾಟಾಳ್ ನಾಗರಾಜ್ : ನಾನು ಮುಖ್ಯಮಂತ್ರಿಯಾಗುವುದನ್ನು ಮಾನ್ಯ ಅಧ್ಯಕ್ಷರೇ ತಾವು, ಮಾನ್ಯ ಖರ್ಗೆಯವರು, ಪ್ರಕಾಶ್‌ರವರು ಎಲ್ಲರೂ ನೋಡುತ್ತೀರಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಬೀ.ಚಿ.ಯವರು ಕೇಳುತ್ತಾರೆ ನೀವು ಮುಖ್ಯಮಂತ್ರಿಯಾದರೆ ಏನು ಮಾಡುತ್ತೀರಿ ಅಂತ ಆಗ ತಿಮ್ಮ ಉತ್ತರ ಕೊಡುತ್ತಾನೆ, ನಾನು ಮುಖ್ಯಮಂತ್ರಿಯಾದ ದಿವಸ ನನ್ನನ್ನು ನಾನೇ ಜಿಲ್ಲಾಧಿಕಾರಿಯನ್ನಾಗಿ ನೇಮಕ ಮಾಡಿಕೊಂಡು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಡುತ್ತೇನೆಂದು ಹೇಳುತ್ತಾನೆ.

ಶ್ರೀ ವಾಟಳ್ ನಾಗರಾಜ್ : ನಾನು ಮುಖ್ಯ ಮಂತ್ರಿ ಆಗುವ ದಿವಸ ಬಹಳ ದೂರವಿಲ್ಲ. ನಾನು ಮುಖ್ಯಮಂತ್ರಿ ಆಗುತ್ತೇನೆ.

ಮಾನ್ಯ ಸದಸ್ಯರು : ಕರುಣಾ ನಿಧಿಯವರು ಕಪ್ಪು ಕನ್ನಡಕ ಹಾಕಿದರಿಂದ ಮುಖ್ಯಮಂತ್ರಿ ಆಗಿದ್ದರು ಹಾಗೆಯೇ ಶ್ರೀ ವಾಟಳ್‌ರವರಿಗೂ ಆಯೋಗ ಇರಬಹುದು.

ಆ) ಕೋಲಾರ ಜಿಲ್ಲೆಯಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಗೂಡಿನ ಬೆಲೆ ಕುಸಿದಿರುವುದರ ಬಗ್ಗೆ

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೇ, ಕೋಲಾರ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗತಕ್ಕಂಥ ರೇಷ್ಮೆಯಲ್ಲಿ ಮೂರನೇ ಎರಡು ಭಾಗದಷ್ಟು ಕಾಣಿಕೆಯನ್ನು ಕೊಡುತ್ತಿದೆ. ಕಳೆದ ಕೆಲವು ದಿವಸಗಳಿಂದ ಮಾರುಕಟ್ಟೆಯಲ್ಲಿ ರೇಷ್ಮೆ ಗೂಡಿನ ಬೆಲೆ ಬಹಳ ಕುಸಿದಿದೆ. ರೈತ ಕಂಗಾಲಾಗಿದ್ದಾನೆ. ಸದನದ ಸಮಯವನ್ನು ಬಳಸಿ ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ಇಂಥಾದ್ದೇ ಸ್ಥಿತಿ ಉದ್ಭವವಾದಾಗ ಆಗಿನ ಸರ್ಕಾರ ದೊಡ್ಡ ಮನಸ್ಸು ಮಾಡಿ ರೈತನ ನೆರವಿಗೆ ಬರುವುದಕ್ಕೆ ಒಂದು ಕೆ.ಜಿ.ಗೆ 10 ರೂಪಾಯಿಗಳಂತೆ ಬೆಂಬಲ